ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶಿಶುವಿನ ಹಾಳ ಶರೀಫ್ ಶಿವಯೋಗಿ ಸುಕ್ಷೇತ್ರವನ್ನು ಪ್ರವಾಸಿ ಕೇಂದ್ರ ಎಂದು ಪರಿಗಣಿಸುವುದು

593. ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕ್ ಶಿಶುವಿನಹಾಳ ಶರೀಫ್ ಶಿವಯೋಗಿ ಸುಕ್ಷೇತ್ರವನ್ನು ಪ್ರವಾಸಿ ಅಭಿವೃದ್ಧಿ ಕೇಂದ್ರವನ್ನಾಗಿ ಪರಿಗಣಿಸುವ ಉದ್ದೇಶವೇನಾದರೂ ಸರ್ಕಾರದವರ ಮುಂದಿದೆಯೆ?

ಆ) ಹಾಗಿದ್ದಲ್ಲಿ, ಇನ್ನು ಎಷ್ಟು ದಿವಸಗಳಲ್ಲಿ ಈ ಕೆಲಸ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ದೇವದಾಸಿಯರ ಪುನರ್‌ವಸತಿ ಕುರಿತು

510. ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದೇವದಾಸಿಯರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡಬೇಕು)

ಆ) ದೇವದಾಸಿಯರ ಪುನರ್‌ವಸತಿಗಾಗಿ ಕಾರ್ಯಕ್ರಮಗಳೇನು?

ಇ) ದೇವದಾಸಿಯರಿಗೆ ಮೂಢನಂಬಿಕೆಗಳಿಂದ ಹಾಗೂ ದುರ್ನಡತೆಯಿಂದ ವಿಮುಕ್ತಿಹೊಂದಲು ಮಾನಸಿಕ ಪರಿವರ್ತನೆ ಮಾಡುವ ಕಾರ್ಯಕ್ರಮಗಳೇನು?

ಈ) ರಾಜ್ಯಾದ್ಯಂತ ಪುನರ್‌ವಸತಿ ಕೇಂದ್ರಗಳ ಸಂಖ್ಯೆ ಎಷ್ಟು?

ಶ್ರೀ ಬಿ. ಶಿವಣ್ಣ (ಕಾನೂನು, ಸಮಾಜ ಕಲ್ಯಾಣ ಸಚಿವರು):–

ಅ) 1989–90 ನೇ ಸಾಲಿನ ಸಮೀಕ್ಷೆಯ ಪ್ರಕಾರ ಒಟ್ಟು ಸಂಖ್ಯೆ 14197

ಬೆಳಗಾಂ	:	3737
ಬಿಜಾಪುರ	:	4895
ಧಾರವಾಡ	:	2503
ರಾಯಚೂರು	:	1089
ಗುಲ್ಬರ್ಗ	:	318
ಬಳ್ಳಾರಿ	:	1635
ಬೀದರ್	:	20
ಒಟ್ಟು	:	14197

ಆ) 1) ಸರ್ಕಾರವು ದೇವದಾಸಿ ಪದ್ಧತಿಯ ನಿರುದ್ಧ ಹೋರಾಡಲು ಶಾಸನವನ್ನು ಮಾಡಿರುತ್ತಾರೆ.

2) ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಯ ಕೇಂದ್ರ ಕಛೇರಿಯಲ್ಲಿ ದೇವದಾಸಿ ಪದ್ಧತಿ ಹಾಗೂ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡಲು ಒಂದು ವಿಶೇಷ ಘಟಕವನ್ನು ತೆರೆಯಲಾಗಿದೆ.

3) ಸರ್ಕಾರವು ದೇವದಾಸಿ ಮಕ್ಕಳಿಗಾಗಿ ಶಿಕ್ಷಣ, ಆಶ್ರಯ, ತರಬೇತಿ ಮತ್ತು ಪುನರ್‌ವಸತಿ ಒದಗಿಸಲು ಅಥಣಿಯಲ್ಲಿ ಬಾಲಮಂದಿರವನ್ನು ಸ್ಥಾಪಿಸಿದೆ.

4) ದೇವದಾಸಿಯರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಇಲಾಖೆಯ ಹಾಗೂ ಸರ್ಕಾರದ ಯೋಜನೆಗಳಾದ ಗೃಹಕಲ್ಯಾಣ, ಐ.ಆರ್.ಡಿ.ಪಿ. ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

5) ದೇವದಾಸಿಯರ ವಿವಾಹವನ್ನು ಪ್ರೋತ್ಸಾಹಿಸಲು ಪ್ರತಿ ದಂಪತಿಗೆ ರೂ.3000-00ನ್ನು ಕೊಡಲಾಗುತ್ತಿದೆ. ಇಲ್ಲಿಯತನಕ ಸುಮರು 258 ದೇವದಾಸಿ ದಂಪತಿಗಳು ಇದರ ಅನುಕೂಲವನ್ನು ಪಡೆದುಕೊಂಡಿದ್ದಾರೆ.

6) ಕರಪತ್ರಗಳು, ಬಿತ್ತಿ ಪತ್ರಗಳು, ರೇಡಿಯೋಗಳು ಹಾಗೂ ದೂರದರ್ಶನ ಕಾರ್ಯಕ್ರಮಗಳ ಮೂಲಕ ದೇವದಾಸಿ ಪದ್ಧತಿಯ ಹೀನ ಪ್ರವೃತ್ತಿಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದೆ.

7) ದೇವದಾಸಿ ಪದ್ಧತಿಯ ಬಗ್ಗೆ ಒಂದು ಸಾಕ್ಷ್ಯ ಚಿತ್ರವನ್ನು ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಯು ಸಿದ್ಧಪಡಿಸಿದೆ.

8) ಮಹಿಳಾ ಅಭಿವೃದ್ಧಿ ನಿಗಮವು ದೇವದಾಸಿಯರ ಪುನರ್‌ವಸತಿಗಾಗಿ ಕೇಂದ್ರ ಸರ್ಕಾರದ ವಿಶೇಷ ಸಹಾಯ ಹಾಗೂ ವಿಶೇಷ ಘಟಕ ಯೋಜನೆಯ ಹಣದಿಂದ ಎಲ್ಲಾ 6 ಜಿಲ್ಲೆಗಳಲ್ಲೂ ವ್ಯಾಪಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ದೇವದಾಸಿಯರ ಮಕ್ಕಳಿಗೆ ನವೋದಯ ಮಾದರಿಯ ಶಾಲೆಗಳ ಮೂಲಕ ಶಿಕ್ಷಣ, ಆರ್ಥಿಕ ಚಟುವಟಿಕೆಗಳು, ಆರೋಗ್ಯದ ಬಗ್ಗೆ ತಿಳುವಳಿಕೆ ಹಾಗೂ ಮಕ್ಕಳ ಕುಶಲತೆಯನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

ಇ) ದೇವದಾಸಿಯ ಪದ್ಧತಿಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಾರ್ಯಾಗಾರಗಳು, ಅರಿವು ಮೂಡಿಸುವ ಶಿಬಿರಗಳು ಮತ್ತು ಸಂಕೀರ್ಣಗಳನ್ನು ಏರ್ಪಡಿಸಲಾಗುತ್ತಿರುತ್ತದೆ.

(2) ಬಿತ್ತಿ ಪತ್ರಗಳು ಕರಪತ್ರಗಳು ಮತ್ತು ರೇಡಿಯೋ ಮತ್ತು ದೂರದರ್ಶನಗಳ ಮುಖಾಂತರವೂ ಕೂಡ ಈ ಹೀನ ದೇವದಾಸಿ ಪದ್ಧತಿಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ.

ಈ) ಇರುವುದಿಲ್ಲ.

ಕರ್ನಾಟಕದಲ್ಲಿನ ಸೋಲಿಗ ಸಮಾಜ ಹಾಗೂ ಇನ್ನುಳಿದ ಆದಿವಾಸಿ ಜನಾಂಗದ ಬಗ್ಗೆ

595. ಶ್ರೀ ಮಲ್ಲಾರಿಗೌಡ ಎಸ್, ಪಾಟೀಲ್ (ಸಂಕೇಶ್ವರ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಸೋಲಿಗ ಸಮಾಜದ ಜನ ಸಂಖ್ಯೆ ಎಷ್ಟು ಹಾಗೂ ಈ ಸಮಾಜವಿರುವ ಭಾಗ ಯಾವುದು?

ಆ) ಸೋಲಿಗ ಸಮಾಜದ ಆರ್ಥಿಕ ಸಾಮಾಜಿಕ ಶೈಕ್ಷಣಿಕ ಮಟ್ಟವನ್ನು ಸುಧಾರಿಸಲು ಸರ್ಕಾರದ ಕಾರ್ಯಕ್ರಮಗಳೇನು?